ಓ:ಎಸ್:ನಂ.250/2015

ಪಿ.ಡಬ್ಲ್ಯು- 2

**ದಿಃ 08-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿಯು 2010 ರಿಂದ ನನಗೆ ಪರಿಚಯವಿರುತ್ತಾರೆ. ವಾದಿಯು ಅದಕ್ಕೂ ಪೂರ್ವದಲ್ಲಿ ಹೆಬ್ಬೆ ಗ್ರಾಮದಲ್ಲಿ ವಾಸವಿದ್ದು, ಅವರು ಅಲ್ಲಿರುವ ಬಗ್ಗೆ ನನಗೆ ದಾಖಲೆಗಳನ್ನು ತೋರಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ದಾಖಲೆಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ಎಂದೂ ಸಹ ಹೆಬ್ಬೆ ಗ್ರಾಮದಲ್ಲಿ ವಾಸ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಭತ್ತ ಕಟಾವು ಮಾಡಿರುವ ಬಗ್ಗೆ ಪೊಲೀಸರಿಗೆ ವಾದಿಯರು ದೂರು ನೀಡಿರುತ್ತಾರೆ. ಸದರಿ ದಾಖಲೆಯನ್ನು ನಾನು ನೋಡಿರುತ್ತೇನೆ. ನಾನು ಹೇಳಿದಂತೆ ವಾದಿಯರು ಯಾವುದೇ ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ತಡೆಯಾಜ್ಞೆ ಆಗುವವರೆಗೂ ಪ್ರತಿವಾದಿಯೇ ದಾವ ಸ್ವತ್ತಿನ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿಯು ಎಂದೂ ಸಹ ದಾವ ಸ್ವತ್ತಿನ ಉಳುಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಹೇಳಿದಂತೆ ಅವರಿಗೆ ಅನುಕೂಲವಾಗಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೇ ಭದ್ರಮ್ಮನ ಜೊತೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯು ಚಿಕ್ಕವರಾಗಿದ್ದರಿಂದ ವಾದಿಯು ಭದ್ರಮ್ಮನ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ ಭದ್ರಮ್ಮನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. 1ನೇ ವಾದಿ ಶಿವಮೊಗ್ಗದಿಂದ ಹೆಬ್ಬೆ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಭದ್ರಮ್ಮನ ಗಂಡ ಸಿದ್ರಾಮಪ್ಪ ಎಂದರೆ ನನಗೆ ಗೊತ್ತಿಲ್ಲ. ಭದ್ರಮ್ಮನ ಮತ್ತು ಸಿದ್ರಾಮಪ್ಪ 1ನೇ ವಾದಿ ಮತ್ತು ಪ್ರತಿವಾದಿಗೆ ಅಜ್ಜ ಅಜ್ಜಿ ಆಗಬೇಕು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರು ಭದ್ರಮ್ಮನ ಮನೆಯಲ್ಲಿಯೇ ಜೊತೆಯಾಗಿ ವಾಸವಿದ್ದರು ಎಂದರೆ ಸರಿಯಲ್ಲ. ವಾದಿಯರು ಹೆಬ್ಬೆ ಗ್ರಾಮದಲ್ಲಿ ಸ್ವಂತ ಮನೆ ಮಾಡಿಕೊಂಡು ವಾಸವಾಗಿಲ್ಲ ಎಂದರೆ ಸರಿಯಲ್ಲ. ಭದ್ರಮ್ಮನ ಮಕ್ಕಳಲ್ಲಿ ಗಂಗಮ್ಮನವರ ಹೆಸರು ಗೊತ್ತಿದ್ದು, ಉಳಿದವರ ಹೆಸರು ನನಗೆ ಗೊತ್ತಿಲ್ಲ. ವಾದಿಯ ಹೆಬ್ಬೆ ಗ್ರಾಮದ ಮನೆಯ ಅಕ್ಕ ಪಕ್ಕದವರು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಎಂ.ಸಿ. ಹಳ್ಳಿಯಲ್ಲಿ ಮನೆ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ದಾವೆಯ ಬಗ್ಗೆ ಏನೂ ತಿಳಿಯದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

ಮರು ವಿಚಾರಣೆಃ ಇಲ್ಲ
*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

**ಓ. ಕೇ. ಸ. ಇ. ಎ. ಒ.**

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**